# ಸ್ತನ ತೆರಿಗೆ

ರಾಜ್ಯದ ಬೊಕ್ಕಸ ತುಂಬುವುದು ತೆರಿಗೆಯಿಂದ. ಜನಸಾಮಾನ್ಯರು ತಮ್ಮನ್ನು ಆಳಲೋಸುಗ ಅನುಕೂಲಮಾಡಿಕೊಡಲು ತಮ್ಮ ದುಡಿಮೆಯ ಸ್ವಲ್ಪ ಪಾಲನ್ನು ರಾಜ್ಯಕ್ಕೆ ಕೊಡುವುದೇ ತೆರಿಗೆ. ಆಳುವವರು ಅದನ್ನು ವಿವಿಧ ಹೆಸರಿನಿಂದ ಕರೆದು ವಸೂಲು ಮಾಡುತ್ತಾರೆ. ಅದು ಏಕಚಕ್ರಾಧಿಪತ್ಯವಿರಲಿ, ಬಂಡವಾಳಶಾಹಿ ಅಥವಾ ಸಮತಾವಾದೀ ಸರ್ಕಾರವಿರಲಿ, ಆದಾಯ ಮೂಲದಲ್ಲಿ ತೆರಿಗೆಯೇ ಪ್ರಧಾನ. ಹಿಂದಿನ ಕಾಲದಲ್ಲಿ ಆಳರಸರು ತಮ್ಮ ತಿಕ್ಕಲುತನದಿಂದ ಮನಸೋ ಇಚ್ಛೆ ತೆರಿಗೆ ವಿಧಿಸುತ್ತಿದ್ದರೆಂದು ಕೇಳಿದ್ದೇವೆ. ಭಾರತದ ಸಂದರ್ಭದಲ್ಲಿ ಅಂಥ ಒಂದು ವಿಚಿತ್ರ ಪದ್ಧತಿ ಮಲಬಾರ್ ಪ್ರದೇಶದ ತಿರುವಾಂಕೂರು ರಾಜ್ಯದಲ್ಲಿ ಜಾರಿಯಲ್ಲಿತ್ತು ಎನ್ನುವುದನ್ನು ಕೇಳುವುದಕ್ಕೂ ಕರ್ಕಶವೆನಿಸುತ್ತದೆ.

ಜಾತಿಪದ್ಧತಿಯ ಉಪ ಉತ್ಪನ್ನವಾದ ಅಸ್ಪೃಶ್ಯತೆಯನ್ನು ಎಷ್ಟು ಹಿಂಸಾನಂದದಿಂದ ಆಚರಿಸಿದ್ದಿರಬಹುದೆಂಬುದಕ್ಕೆ ಇದೊಂದು ಬರ್ಬರ ಉದಾಹರಣೆ. ದೇವರ ಸ್ವಂತ ರಾಜ್ಯವಾದ ಕೇರಳದಲ್ಲಿ ಅಸ್ಪೃಶ್ಯ ಜಾತಿಗಳಲ್ಲಿ ಈಳವ ಜಾತಿಯೂ ಸೇರಿಕೊಂಡಿದೆ (ಇವರಿಗೆ ಕರ್ನಾಟಕದಲ್ಲಿ ಈ ಕಳಂಕದಿಂದ ವಿನಾಯಿತಿ ಇದೆ). ಕೇವಲ ಎರಡು ಶತಮಾನಗಳ ಹಿಂದೆ ಅಲ್ಲಿನ ಅಸ್ಪೃಶ್ಯ ಜಾತಿಯ ಮಹಿಳೆಯರು ತಮ್ಮ ಎದೆಭಾಗವನ್ನು ಮುಚ್ಚಿಕೊಳ್ಳಬಾರದು ಎಂಬ ವಿಕೃತ ಕಾಯ್ದೆ ಇತ್ತು. ಮನೆಯಿಂದ ಹೊರಗೆ ಹೋಗುವಾಗಲೂ ಸಹ ಮೇಲುಡುಗೆ ಧರಿಸುವಂತಿರಲಿಲ್ಲ. ಅದರಲ್ಲೂ ಮೇಲ್ಜಾತಿಯ ಗಂಡಸರ ಮುಂದೆ ಮೇಲುಹೊದಿಕೆ ಅಗೌರವಸೂಚಕವೆಂದು ತಿಳಿಯಲಾಗುತ್ತಿತ್ತು (ಅದರ ನೈಜ ಕಾರಣವನ್ನು ಸಭ್ಯ ಸಮಾಜ ತಿಳಿದುಕೊಳ್ಳಲು ಯೋಗ್ಯವಲ್ಲ). ತಮ್ಮ ಮರ್ಯಾದೆಗೆ ಅಂಜಿ ಹಾಗೇನಾದರೂ ಎದೆಯನ್ನು ಮುಚ್ಚಿಕೊಳ್ಳಬಯಸಿದರೆ ರಾಜ್ಯಕ್ಕೆ 'ಮುಳುಕ್ಕರಮ್' ಅಂದರೆ 'ಸ್ತನ ತೆರಿಗೆ' ಪಾವತಿಸಬೇಕಾಗಿತ್ತು! ತಮ್ಮ ಕುಟುಂಬದ ಹೆಣ್ಣುಮಕ್ಕಳ ಮಾರ್ಯಾದೆಯನ್ನು ಕಾಪಾಡುವುದಕ್ಕಾಗಿ ಜನರು ಮಿಷನರಿಗಳ ಮೊರೆಹೋಗುತ್ತಿದ್ದರು. ಆದ್ದರಿಂದ ಆ ರಾಜ್ಯದಲ್ಲಿ ಮತಾಂತರ ಬೃಹತ್ ಪ್ರಮಾಣದಲ್ಲಿ ನಡೆಯಿತು ಎಂಬುದು ಐತಿಹಾಸಿಕ ಸತ್ಯವಾಗಿದೆ. ಅದಿರಲಿ, ಇಂತಹ ಕರಾಳ ಶಾಸನವನ್ನು ಕೊನೆಗಾಣಿಸಿದ ಕೀರ್ತಿ ನಂಗೆಲಿ ಎನ್ನುವ ಸಾಧ್ವಿ ಮಹಿಳೆಗೆ ಸಲ್ಲುತ್ತದೆ.

ನಂಗೆಲಿ ಎಂಬ ಈಳವ ಹೆಣ್ಣುಮಗಳು ಸಾರ್ವಜನಿಕವಾಗಿ ತೆರೆದೆದೆಯಲ್ಲಿ ಓಡಾಡುವುದನ್ನು ವಿರೋಧಿಸಿದಳು, ಅಷ್ಟೇ ಅಲ್ಲ ಮೇಲುಹೊದಿಕೆ ಧರಿಸಿದ್ದಕ್ಕಾಗಿ ತೆರಿಗೆಯನ್ನು ಕೊಡಲು ನಿರಾಕರಿಸಿದಳು. ಹೀನಜಾತಿಯ ಹೆಣ್ಣೊಬ್ಬಳ ಧಾರ್ಷ್ಟ್ಯವನ್ನು ಕೇಳಿ ಕೋಪಾವಿಷ್ಟನಾದ ರಾಜ ತಿರುನಾಳ್ ಬಲರಾಮ ವರ್ಮ (1798–1810) ನಾಚಿಕೆಯಿಲ್ಲದೆ ಗ್ರಾಮಲೆಕ್ಕಿಗನನ್ನು (ಪ್ರವದಿಯರ್) ಮುಳುಕ್ಕರಮ್ ವಸೂಲಿಗೆಂದು ನಂಗೆಲಿಯ ಮನೆಗೆ ಕಳಿಸುತ್ತಾನೆ. ನಂಗೆಲಿ ಒಳಗೆ ಹೋದವಳೆ ತನ್ನ ಎರಡೂ ಸ್ತನಗಳನ್ನು ಕತ್ತರಿಸಿ ಬಾಳೆ ಎಲೆಯ ಮೇಲಿಟ್ಟು ತಂದೊಪ್ಪಿಸುತ್ತಾಳೆ (ಕೆಳಜಾತಿಗಳು ತೆರಿಗೆ ಪಾವತಿಸುವ ವಿಧಾನ ಹಣವನ್ನು ಬಾಳೆಯ ಎಲೆ ಮೇಲಿಟ್ಟು ಕೊಡುವುದಾಗಿತ್ತು). ಅದನ್ನು ನೋಡಿದ ಆ ಅಧಿಕಾರಿ ಮೂರ್ಚೆ ಬಂದವನಂತೆ ಬಿದ್ದು ಎದ್ದು ಓಡಿಹೋಗುತ್ತಾನೆ. ರಕ್ತಸ್ರಾವದಿಂದ ನಂಗೆಲಿ ಸಾವನ್ನಪ್ಪುತ್ತಾಳೆ. ನಂಗೆಲಿಯ ಗಂಡ ಚಿರುಕುಂದನ್ ಆ ಹೃದಯವಿದ್ರಾವಕ ಘಟನೆಗೆ ನೊಂದು ಸತಿಯ ಚಿತೆಯನ್ನೇರಿ ಪ್ರಾಣ ಕಳೆದುಕೊಳ್ಳುತ್ತಾನೆ. ಇದನ್ನು ತಿಳಿದ ರಾಜ ವ್ಯತಿರಿಕ್ತ ಸಾರ್ವಜನಿಕ ಪರಿಣಾಮಗಳನ್ನು ಊಹಿಸಿ ಮರುದಿನವೇ ಮುಳುಕ್ಕರಮ್ ತೆರಿಗೆಯನ್ನು ರದ್ದುಗೊಳಿಸುತ್ತಾನೆ. ಇದು ನಡೆದದ್ದು 1803ರಲ್ಲಿ. ನಂಗೆಲಿ ಪ್ರಾಯಶಃ ಭೂಗೋಳದಲ್ಲಿ ಎಲ್ಲೂ ಕಾಣದಂತಹ ಕರಾಳ ಕಾಯಿದೆಗೆ ಕೊನೆ ಹಾಡಿದರೆ ಅವಳ ಪತಿ ಚಿರುಕುಂದನ್ 'ಪತಿ' ಹೋಗುವ ಮೂಲಕ ಆ ಕಾಲದಲ್ಲಿ ಪ್ರಚಲಿತವಿದ್ದ ಸತಿಪದ್ಧತಿಯನ್ನು ಝುಂಕಿಸಿದ್ದಾನೆ.

ವರ್ಣಗಳನ್ನಾಧರಿಸಿ ಶಿಕ್ಷೆಯ ಸ್ವರೂಪವನ್ನು ನಿಗದಿಪಡಿಸುವುದಲ್ಲದೆ ಅವರ್ಣೀಯರಾದ ಚಂಡಾಳರಿಗೆ ಉಗ್ರರೂಪದ ಶಿಕ್ಷೆಯನ್ನು ಮನು ವಿಧಿಸುತ್ತಾನೆ. ಶಿಕ್ಷೆ ಅಪರಾಧಕ್ಕಾಗಿ ಅಲ್ಲ. ತನ್ನರಿವಿಲ್ಲದೇ ಉಂಟಾದ ಹುಟ್ಟಿನ ಕಾರಣಕ್ಕಾಗಿ. ಅದರಿಂದ ಸ್ಫೂರ್ತಿಗೊಂಡವರಂತೆ ರಾಜಮಹಾರಾಜರು ಶೂದ್ರಾತಿಶೂದ್ರರಿಗೆ ತಾರತಮ್ಯ ತೆರಿಗೆಯನ್ನು ವಿಧಿಸಿದ್ದಾರೆಂದು ತೋರುತ್ತದೆ. ಭೂಮಿಯ ಒಡೆತನ, ಆಸ್ತಿಯ ಹಕ್ಕು, ಆದಾಯದ ಮೂಲ ಯಾವುದೂ ಇಲ್ಲದವರ ಮೇಲೆ ಯಾವ ರೀತಿಯ ತೆರಿಗೆ ಹೇ(ಹೀ)ರಬೇಕು ಎಂಬುದನ್ನು ಸಂಶೋಧಿಸಿದಂತೆ ಕಾಣುತ್ತದೆ. ಕೆಳಜಾತಿಯ ಗಂಡಸರು ಮೀಸೆ ಬೆಳೆಸಿದರೆ ತೆರಿಗೆ, ಮಹಿಳೆಯರು ಒಡವೆ ಧರಿಸಿದರೆ ತೆರಿಗೆ; ಹೀಗೆ ಚಿತ್ರವಿಚಿತ್ರ ಸಂಗತಿಗಳಿಗೆ ತೆರಿಗೆ ಹಾಕುತ್ತಿದ್ದ ಉಲ್ಲೇಖಗಳು ಸಿಗುತ್ತವೆ. ಕೆಳಜಾತಿಗಳನ್ನು ಶಾಶ್ವತವಾಗಿ ಬಡತನದ ಕೂಪದಲ್ಲಿರಿಸಲು ಇಂಥ ಹುನ್ನಾರಗಳಿದ್ದವು ಎಂದು ಇತಿಹಾಸಕಾರರು ವಿಶ್ಲೇಷಿಸುತ್ತಾರೆ. ನಂಗೆಲಿ ಮತ್ತು ಚಿರುಕುಂದನ್ ತಮ್ಮ ತ್ಯಾಗ, ಬಲಿದಾನಗಳಿಂದ ಅಂದಿನ ಕ್ರೂರ ಸಮಾಜಕ್ಕೆ ಮಾನವೀಯತೆಯನ್ನು ಕಲಿಸಿದರು. ಆದರೂ ಅನಾಮಿಕರಾಗಿಯೆ ಉಳಿದಿದ್ದಾರೆ. ಹಾಗೆಯೆ ಉಳಿಯುತ್ತಾರೆ ಕೂಡ. ಕಾರಣ ಸ್ಪಷ್ಟವಾಗಿಯೆ ಇದೆ. ಇಂಥ ವಿಕೃತಿಗಳನ್ನು ಕಂಡು ಕೇಳಿ ಕ್ರುದ್ಧರಾಗಿದ್ದ ಬಾಬಾಸಾಹೇಬ್ ಅಂಬೇಡ್ಕರ್ ಜಾತಿವಿನಾಶದ ಪ್ರತಿಪಾದಕರಾಗಿದ್ದರು, **Religion must be based on ethics and not shastras and traditions** ಎಂದು ಹೇಳಿದ್ದರು.

■ **ಮೂಚಿ**

## ಮಾತೇ ಮುತ್ತು

★ ನಾವು ಪ್ರೀತಿಯಿಂದಲೇ ಹುಟ್ಟಿದವರು. ಪ್ರೀತಿಯೇ ನಮ್ಮ ತಾಯಿ.
–ರೂಮಿ

★ ಮೌನ– ಮಹಾಶಕ್ತಿಯ ಮೂಲ.
–ಲಾವೊ ತ್ಸು

★ ಮಕ್ಕಳಿಗೆ ಸದಾ ಕಾಲ ಸತ್ಯವನ್ನೇ ಹೇಳಿ.
–ಬಾಬ್ ಮಾರ್ಲೆ

★ ನೀವು ಹತ್ತಬಯಸುವ ಪರ್ವತ ನಿಮಗೆ ಸವಾಲೇ ಅಲ್ಲ; ಆದರೆ ನಿಮ್ಮ ಶೂನಲ್ಲಿರುವ ಮೊಳೆ ತೊಂದರೆ ಕೊಡುವುದು ಖಂಡಿತ.
–ಬಾಕ್ಸರ್ ಮುಹಮ್ಮದ್ ಅಲಿ

★ ಸಮಸ್ಯೆಯನ್ನು ನಾವು ನೈಜವಾಗಿ ಅರ್ಥ ಮಾಡಿಕೊಂಡರೆ ಪರಿಹಾರ ಸಿಕ್ಕೇ ಸಿಗುತ್ತದೆ. ಪರಿಹಾರವಿಲ್ಲದೆ ಸಮಸ್ಯೆ ಇಲ್ಲ.
–ಜಿಡ್ಡು ಕೃಷ್ಣಮೂರ್ತಿ

★ ಸರ್ವಾಧಿಕಾರ ವಾಸ್ತವ ಆದಾಗ, ಕ್ರಾಂತಿ ಪ್ರಜೆಗಳ ಹಕ್ಕಾಗುತ್ತದೆ.
–ವಿಕ್ಟರ್ ಹ್ಯೂಗೊ

★ ಜನರಿಗೆ ಸಾಮಾನ್ಯ ಜ್ಞಾನ ಇಲ್ಲದಲ್ಲಿ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಆಗುವುದಿಲ್ಲ.
–ಜಾನ್ ಆಡಮ್ಸ್

★ ಪ್ರತಿಯೊಬ್ಬನೂ ತಾನು ಮಾಡದ ಒಳ್ಳೆಯ ಕೆಲಸಗಳ ಬಗ್ಗೆ ಪಶ್ಚಾತ್ತಾಪ ಪಡಬೇಕು.
–ವಾಲ್ಟೇರ್

★ ಸಾವಿರಾರು ಜನರನ್ನು ಗೆಲ್ಲುವವನು ವೀರನಲ್ಲ, ಮನಸ್ಸನ್ನು ಗೆಲ್ಲುವವನು ವೀರ.
–ಗೌತಮ ಬುದ್ಧ

★ ನಿರಾಸೆ ಮರಣದ ಮತ್ತೊಂದು ಹೆಸರು.
–ಲಿಯೊ ಟಾಲ್‌ಸ್ಟಾಯ್

★ ಉನ್ನತಿಯ ದಾರಿಯಲ್ಲಿ ಸಭ್ಯತೆಯ ಅಗತ್ಯ ಹೆಚ್ಚು ಇರುತ್ತದೆ
–ಎಡ್ವರ್ಡ್ ಯಂಗ್

★ ಪ್ರಾಮಾಣಿಕ ಟೀಕೆ ಟಿಪ್ಪಣಿ ಆರೋಗ್ಯಪೂರ್ಣವಾದ ಗುಣ.
–ಮಹಾತ್ಮ ಗಾಂಧೀಜಿ

★ ಪರಿಸರದ ಬಹುಮುಖ್ಯ ತತ್ವವೆಂದರೆ, ಈ ಪರಿಸರದಲ್ಲಿ ನೀವೊಬ್ಬರೇ ಇರುವುದಲ್ಲ ಎನ್ನುವುದು.
–ಮಹಾವೀರ

★ ಎದುರಿಗೆ ಕಾಣದ ಮನುಷ್ಯರನ್ನೇ ಗೌರವಿಸದಿದ್ದರೆ; ಕಾಣದ ದೇವರನ್ನು ಹೇಗೆ ಪ್ರಾರ್ಥಿಸಲು ಸಾಧ್ಯ?
–ಮದರ್ ತೆರೇಸಾ